# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 24.02.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಹಳಷ್ಟು ಆರೋಗ್ಯ ಕೇಂದ್ರಗಳು ಆಸ್ಪತ್ರೆ, ನರ್ಸಿಂಗ್ ಹೋಮ್, ರಕ್ತ ನಿಧಿ, ಲ್ಯಾಬೋರೇಟರಿ, ದಂತ ಚಿಕಿತ್ಸಾಲಯಗಳು ಇತ್ಯಾದಿ, ಇದ್ದು ಇಲ್ಲಿ ಉತ್ಪತ್ತಿಯಾಗುವ ಜೈವಿಕ ತ್ಯಾಜ್ಯ ವಸ್ತುಗಳನ್ನು ಘನ ತ್ಯಾಜ್ಯ ವಸ್ತುಗಳ ಜೊತೆಗೆ ನೀಡುತ್ತಿರುವುದು ಕಂಡುಬಂದಿದೆ. ಇದರಿಂದ ಸಾರ್ವಜನಿಕರಿಗೆ ಸಾಂಕ್ರಾಮಿಕ ರೋಗಗಳು ಅತೀ ವೇಗದಲ್ಲಿ ಹರಡುತ್ತಿರುವುದು ಕಂಡುಬಂದಿದೆ.

ಆದ್ದರಿಂದ, ಕೇಂದ್ರ ಸರ್ಕಾರವು ಈ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಮುಂದಾಗಿದ್ದು, ಬಯೋ ಮೆಡಿಕಲ್ ವೇಸ್ಟ್ ರೂಲ್ಸ್ 1998 ನಿಯಮವನ್ನು ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಈ ವಿಷಯಗಳಿಗೆ ಸಂಬಂಧಪಟ್ಟಂತೆ, ಸಂಪೂರ್ಣ ಮಾಹಿತಿಯನ್ನು ದಿನಾಂಕ: 28.12.2010 ರಂದು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಪ್ರತಿಯೊಂದು ಆರೋಗ್ಯ ಕೇಂದ್ರಗಳು ದಿನಾಂಕ: 31.12.2010 ರೊಳಗಾಗಿ ಪಾಲಿಕೆಯಿಂದ ಪರವಾನಗಿಯನ್ನು ಪಡೆಯಬೇಕೆಂದು ಪ್ರಕಟಣೆಯಲ್ಲಿ ಸೂಚಿಸಲಾಗಿರುತ್ತದೆ.

ಆದರೆ ಕೆಲವು ಆರೋಗ್ಯ ಕೇಂದ್ರಗಳು ಪರವಾನಗಿಯನ್ನು ಪಡೆಯದೇ ನಡೆಸುತ್ತಿರುವುದು ಕಂಡು ಬಂದಿದ್ದು, ಇದೇ ಅಂತಿಮ ಬಾರಿಗೆ ಅನಧಿಕೃತವಾಗಿ ಪರವಾನಗಿಯನ್ನು ಪಡೆಯದೇ ನಡೆಸುತ್ತಿರುವ ಆರೋಗ್ಯ ಕೇಂದ್ರಗಳಿಗೆ ಈ ಮೂಲಕ ತಿಳಿಸುವುದೇನೆಂದರೆ **ದಿನಾಂಕ: 28.02.2011 ರೊಳಗಾಗಿ ಕರ್ನಾಟಕ ಮುನಿಸಿಪಲ್ ಕಾಯ್ದೆ ನಿಯಮ 1976 ಸೆಕ್ಷನ್ 353 ರಂತೆ ಪಾಲಿಕೆ ವತಿಯಿಂದ ಆರೋಗ್ಯ ಪರವಾನಗಿಯನ್ನು ಪಡೆಯಬೇಕೆಂದು ಸೂಚಿಸಿದೆ. ತಪ್ಪಿದಲ್ಲಿ ಅನಧಿಕೃತವಾಗಿ ನಡೆಸುತ್ತಿರುವ ಎಲ್ಲಾ ಆರೋಗ್ಯ ಕೇಂದ್ರಗಳನ್ನು ಪಾಲಿಕೆ ವತಿಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು** ಮುಖ್ಯ ಆರೋಗ್ಯಾಧಿಕಾರಿ ರವರು ಈ ಮೂಲಕ ಅಂತಿಮವಾಗಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ನೋಡಲ್ ಅಧಿಕಾರಿ - ಡಾ|| ದೇವಕಿ ಉಮೇಶ್, ಆರೋಗ್ಯಾಧಿಕಾರಿ (ಪಶ್ಚಿಮ), ಮೊಬೈಲ್: 9880655148, ರಾಮ್ಕಿ ದೂರವಾಣಿ ಸಂಖ್ಯೆ: 080-25444666, ಮರಡಿ ದೂರವಾಣಿ ಸಂಖ್ಯೆ: 080-22103270, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದೂರವಾಣಿ ಸಂಖ್ಯೆ: 080-23229281.

**ಸಾರ್ವಜನಿಕ ಸಂಪರ್ಕಾಧಿಕಾರಿ**